**<u>ಪ್ರಧಾನ ಸಿವಿಲ್  ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು</u>**

**<u>ಸಿಸಿ. ನಂ. 3955/2025</u>**

ಫಿರ್ಯಾದಿ : ಕಡೂರು ಪೊಲೀಸ್ ಠಾಣೆ

ವಿರುದ್ಧ

ಆರೋಪಿಗಳು : 1. ಶ್ರೀ ರಘು ಎಲ್.ಜಿ. ಬಿನ್ ಗಂಗಾಧರ,
ವಯಸ್ಸು ಸುಮಾರು 24 ವರ್ಷ, ಪಾತ್ರೆ ವ್ಯಾಪಾರ,
ವಾಸಃ ತ್ಯಾಗರಾಜನಗರ, ಕಡೂರು ಟೌನ್,
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**<u>ದೋಷಾರೋಪಣೆ</u>**

ಶ್ರೀಮತಿ ಅಫ್ರೀನ್ ಸುಲ್ತಾನ, ಬಿ.ಎ.ಎಲ್., ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆರೋಪಿಗಳಾದ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪಣೆ.

ದಿನಾಂಕ 02.08.2025 ರಂದು ಚಾಸಾ.1 ರವರು ತಮ್ಮ ಸಂಬಂಧಿಕರ ಮನೆಯ ಗೃಹಪ್ರವೇಶಕ್ಕೆ ಹೋಗಿ ವಾಪಾಸ್ಸು ತಮ್ಮ ಗ್ರಾಮವಾದ ಕೇತುಮಾರನಹಳ್ಳಿಗೆ ಹೋಗುತ್ತಿರುವಾಗ, ಕಡೂರು ಪಟ್ಟಣದ ಬಸವೇಶ್ವರ ಆಸ್ಪತ್ರೆಯ ಬಳಿ ಚಿಲ್ಲರೆ ಅಂಗಡಿ ಇಟ್ಟುಕೊಂಡಿರುವ ಚಾಸಾ.4 ರವರನ್ನು ಮಾತನಾಡುತ್ತಿದ್ದು, ಆಗ ಆರೋಪಿತರಾದ ನೀವು ಯಾರೋ ಗೊತ್ತಿಲ್ಲದವರು ತನ್ನ ಅಕ್ಕನನ್ನು ಮಾತನಾಡಿಸುತ್ತಿದ್ದಾರೆಂದು ಕೋಪಗೊಂಡು ಅದೇ ದಿನ ರಾತ್ರಿ ಸುಮಾರು 07.00 ಗಂಟೆ ಸಮಯದಲ್ಲಿ ಕಡೂರು ಪೋಲಿಸ್ ಠಾಣಾ ಸರಹದ್ದಿನ ಚಿಕ್ಕಪಟ್ಟಣಗೆರೆ ಗೇಟ್ ಸಮೀಪ ಎನ್.ಹೆಚ್.173, ಕಡೂರು–ಚಿಕ್ಕಮಗಳೂರು ರಸ್ತೆಯಲ್ಲಿ ಚಾಸಾ.1 ರವರು ಹೋಗುತ್ತಿರುವಾಗ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಕೆಎ–66–ಕ್ಯೂ–5489 ಎಂಬ ಬೈಕಿನಲ್ಲಿ ಹೋಗಿ ಚಾಸಾ.1 ರವರನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿರುವ ಕಾರಣ, ಆರೋಪಿತರಾದ ನೀವು **ಭಾರತೀಯ ನ್ಯಾಯ**

**ಸಂಹಿತೆ ಕಲಂ 126 (2) ಸಹವಾಚಕ ಕಲಂ** 3(5) ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಎರಡನೇಯದಾಗಿ, ಅದೇ ದಿನ, ಸ್ಥಳ ಮತ್ತು ಅದೇ ಸಮಯದಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ ಅಡ್ಡಗಟ್ಟಿ ತಡೆದು ನಿಲ್ಲಿಸಿ, ನಂತರ ನಿಮ್ಮ ಪೈಕಿ 1 ನೇ ಆರೋಪಿತರಾದ ನೀವು ಏಕಾಏಕಿ ಚಾಸಾ.1 ರವರಿಗೆ ಅವರ ಮಾನಸಿಕ ಶಾಂತಿಭಂಗಕ್ಕೆ ಪ್ರೇರೇಪಣೆ ನೀಡುವ ರೀತಿಯಲ್ಲಿ ಸೂಳೆಮಗನೆ, ಬೋಳಿಮಗನೆ ನನ್ನ ಅಕ್ಕನ ಅಂಗಡಿಯ ಹತ್ತಿರ ಯಾಕೆ ಬಂದಿದ್ದೀಯಾ ಎಂದು ಅವಾಚ್ಯವಾಗಿ ಬೈದು ನಿಂದಿಸಿರುವ ಕಾರಣ, ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 352 ಸಹವಾಚಕ ಕಲಂ** 3(5) ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಮೂರನೇಯದಾಗಿ, ಅದೇ ದಿನ, ಸ್ಥಳ ಮತ್ತು ಅದೇ ಸಮಯದಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ ಅಡ್ಡಗಟ್ಟೀ, ಅವಾಚ್ಯವಾಗಿ ಬೈದು, ನಂತರ ಕೈ ಮುಷ್ಠಿಯಿಂದ ಚಾಸಾ.1 ರವರ ಮುಖಕ್ಕೆ, ಮೂಗಿಗೆ ಗುದ್ದಿ, ಹೊಡೆದು ತೀವ್ರ ಸ್ವರೂಪದ ರಕ್ತಗಾಯವನ್ನುಂಟುಮಾಡಿರುವ ಕಾರಣ, ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 117(2) ಸಹವಾಚಕ ಕಲಂ** 3(5) ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ನಾಲ್ಕನೇಯದಾಗಿ, ಅದೇ ದಿನ, ಸ್ಥಳ ಮತ್ತು ಅದೇ ಸಮಯದಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ. 1 ರವರಿಗೆ ಅಡ್ಡಗಟ್ಟೀ, ಬೈದು, ಹೊಡೆದು, ನೀನು ಕಡೂರಿಗೆ ಬಂದರೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿರುವ ಕಾರಣ ಆರೋಪಿತರಾದ ನೀವು **ಭಾರತೀಯ ನ್ಯಾಯ ಸಂಹಿತೆ ಕಲಂ 351(2) ಸಹವಾಚಕ ಕಲಂ** 3(5) ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುವಿರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಆರೋಪಿತರ ಉತ್ತರಃ ತಿಳಿಯಿತು.

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಆರೋಪಿತರ ಉತ್ತರಃ ವಿಚಾರಣೆಯಾಗಬೇಕು.

ಈ ಮೇಲಿನ ಆರೋಪಣೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ತಿಳಿಸಿ ಅವರು ನೀಡಿದ ಉತ್ತರವನ್ನು ಯಥಾ ಪ್ರಕಾರವಾಗಿ ದಾಖಲಿಸಿಕೊಂಡಿದ್ದೇನೆ.

ದಿನಾಂಕಃ 22 ನೇ ಜನವರಿ 2026

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದಂ.ಗಳು, ಕಡೂರು.